

ಮೇಷ್ಟ್ರ ಕೆಲ್ಸ ಶಾಲೇಲಲ್ವೆ? ಇವತ್ತಿನ ಸರ್ಕಾರಿ ಶಾಲಾ ಶಿಕ್ಷಕರನ್ನು ನೋಡಿದರೆ ಹೀಗೆಂದು ಹೇಳುವುದು ಕಷ್ಟ. ತರಗತಿಗಳಲ್ಲಿನ ಪಾಠಕ್ಕೂ ಹೆಚ್ಚು ಪಠ್ಯೇತರ ಚಟುವಟಿಕೆಗಳನ್ನೇ ಹೆಗಲ ಮೇಲೆ ಹೊತ್ತುಕೊಂಡಿರುವ ಶಿಕ್ಷಕರದು, ಸರ್ಕಾರಿ ವ್ಯವಸ್ಥೆಯ ಅತಿ ಶೋಷಿತ ಸಮುದಾಯಗಳಲ್ಲೊಂದು. ಸರ್ಕಾರಿ ಶಾಲೆಗಳನ್ನು ಕಾಪಾಡಿ ಎನ್ನುವ ಭಾವಾವೇಶದ ಕೂಗು ಆಗಾಗ ಮೊಳಗುತ್ತಲೇ ಇರುತ್ತದೆ. ಆದರೆ, ಮೊದಲು ಕಾಪಾಡಬೇಕಿರುವುದು ಶಾಲಾ ಶಿಕ್ಷಕರುಗಳನ್ನು. ಮೇಷ್ಟ್ರುಗಳು ಉಳಿದರಷ್ಟೇ ಶಾಲೆಗಳು ಉಳಿಯುತ್ತವೆ.

■ ಪ್ರವೀಣ ಕುಲಕರ್ಣಿ

ಚಿತ್ರಗಳು: ತಾಜುದ್ದೀನ್ ಆಜಾದ್, ಅನೂಪ್ ತಿಪ್ಪೇಸ್ವಾಮಿ